# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 14.07.2010**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ನಗರದ ಪ್ರಮುಖ ರಸ್ತೆಗಳ ಪಾದಚಾರಿ ಮಾರ್ಗ ಒತ್ತುವರಿ ತೆರವುಗೊಳಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು (ಮತ್ತಿಕೆರೆ) ಉಪ ವಿಭಾಗ ರವರ ವ್ಯಾಪ್ತಿಯಲ್ಲಿ ದಿನಾಂಕ: 10.07.2010 ರಂದು ಮತ್ತಿಕೆರೆ ಕಾಲೋನಿಯ ಮುಖ್ಯರಸ್ತೆಯಲ್ಲಿ ಪಾದಚಾರಿ ರಸ್ತೆಯ ಮೇಲಿರುವ ಗಾಜಿನ ಪೆಟ್ಟಿಗೆಯನ್ನು ತೆರವುಗೊಳಿಸಲಾಯಿತು.

ಕಾವೇರಿ ಅಂಡರ್‌ಪಾಸ್‌ನಿಂದ ಮೇಖ್ರಿ ವೃತ್ತ ಹಾಗೂ ಬಳ್ಳಾರಿ ರಸ್ತೆಯಿಂದ ಸಂಜಯನಗರ ವೃತ್ತದವರೆಗೆ ಹಾಗೂ 8ನೇ ಮುಖ್ಯರಸ್ತೆ ಮಲ್ಲೇಶ್ವರಂನಲ್ಲಿ ಬಿಡಿ ಗುಂಡುಗಳು ಮತ್ತು ಕಲ್ಲು ಚಪ್ಪಡಿಗಳನ್ನು ತೆರವುಗೊಳಿಸಲಾಗಿದೆ. ಮತ್ತಿಕೆರೆ ಮೇಲ್ಸೇತುವೆಯಿಂದ ಮತ್ತಿಕೆರೆ ಮುಖ್ಯರಸ್ತೆವರೆಗೆ ಡೆಬ್ರೀಸ್ ತೆಗೆಯಲಾಗಿರುತ್ತದೆ. ನ್ಯೂ ಬಿ.ಇ.ಎಲ್. ರಸ್ತೆಯ ರಾಮಯ್ಯ ಆಸ್ಪತ್ರೆ ವೃತ್ತದಿಂದ ಚಿಕ್ಕಮಾರನಹಳ್ಳಿ ಬಸ್ ನಿಲ್ದಾಣದಲ್ಲಿ ಹಾಗೂ ಚಿಕ್ಕಮಾರನಹಳ್ಳಿ ಬಸ್ ನಿಲ್ದಾಣದಿಂದ ಗೌರಿ ಅಪಾರ್ಟ್‌ಮೆಂಟ್ಸ್‌ವರೆಗೆ ಬಿಡಿ ಗುಂಡುಗಳು ಮತ್ತು ಕಲ್ಲು ಚಪ್ಪಡಿಗಳನ್ನು ತೆಗೆಯಲಾಗಿದ್ದು, ಪಾದಚಾರಿ ರಸ್ತೆಯ ಮೇಲ್ಮೈನ ಒತ್ತುವರಿ ಜಾಗಗಳನ್ನು ತೆರವುಗೊಳಿಸಲಾಗಿದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 14.07.2010**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ನಗರದ ಪ್ರಮುಖ ರಸ್ತೆಗಳ ಪಾದಚಾರಿ ಮಾರ್ಗ ಒತ್ತುವರಿ ತೆರವುಗೊಳಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು (ರಾಜಾಜಿನಗರ) ಉಪ ವಿಭಾಗ ರವರ ವ್ಯಾಪ್ತಿಯಲ್ಲಿ ದಿನಾಂಕ: 14.07.2010 ರಂದು 19ನೇ ಮುಖ್ಯರಸ್ತೆ ನವರಂಗ್ ವೃತ್ತದಿಂದ 32ನೇ ಅಡ್ಡರಸ್ತೆಯವರೆಗೆ ಹಾಗೂ 41ನೇ ಅಡ್ಡರಸ್ತೆ, ಇ.ಎಸ್.ಐ. ಆಸ್ಪತ್ರೆ ಮುಂಭಾಗದಿಂದ ಡಾ|| ರಾಜ್‌ಕುಮಾರ್ ರಸ್ತೆಯವರೆಗಿನ ಪಾದಚಾರಿ ಮಾರ್ಗದಲ್ಲಿರುವ ಕಲ್ಲು, ಮಣ್ಣು ಇತ್ಯಾದಿ ತ್ಯಾಜ್ಯ ವಸ್ತುಗಳನ್ನು ಹಾಗೂ ಕೆಲವು ಭಾಗದಲ್ಲಿ ತೋಳು ಚರಂಡಿಗಳನ್ನು ಸ್ವಚ್ಛಗೊಳಿಸಿದ್ದು, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗಿದೆ.

ರಾಜರಾಜೇಶ್ವರಿನಗರ ವಾರ್ಡ್-160 ರಲ್ಲಿ 8 ಕಡೆಗಳಲ್ಲಿ ಹಾಗೂ ಕೊಟ್ಟಿಗೇಪಾಳ್ಯ ವಾರ್ಡ್-73 ರಲ್ಲಿ 1 ಕಡೆ ಪಾದಚಾರಿ ಮಾರ್ಗ ಒತ್ತುವರಿ ತೆರವುಗೊಳಿಸಲಾಗಿದೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು (ರಾಜರಾಜೇಶ್ವರಿನಗರ) ಉಪ ವಿಭಾಗ ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**